**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 4069/2023**

**ದಿನಾಂಕಃ 07.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಗೀತಾ | ಚಾಸಾ-1, ಪ್ರಾ.ಸ.-1 |
| ಗಂಡನ ಹೆಸರು ಃ | ಅಶೋಕ | |
| ವಯಸ್ಸು ಃ | 35 ವರ್ಷ | |
| ಉದ್ಯೋಗ ಃ | ಕೂಲಿ | |
| ವಾಸ ಃ | ಅಜ್ಜಂಪುರ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಮೃತ ವ್ಯಕ್ತಿ ನನ್ನ ಗಂಡ. ಚಾಸಾ-5 ಮತ್ತು 6 ರವರು ನನಗೆ ಗೊತ್ತು. ದಿಃ 18.08.2023 ರಂದು ಬೀರೂರು ಸರ್ಕಾರಿ ಆಸ್ಪತ್ರೆ ಮುಂಭಾಗ ಟಮೋಟೋ ಮಾರಾಟ ಮಾಡುತ್ತಿದ್ದಾಗ ಒಬ್ಬ ವ್ಯಕ್ತಿಯನ್ನು ಅಪಘಾತದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು, ನಾನು ಆತನನ್ನು ನೋಡಿದಾಗ ಆತ ನನ್ನ ಗಂಡ ಆಗಿದ್ದರು. ನಾನು ಅವರನ್ನು ನೋಡಿದಾಗ ಅವರ ತಲೆಗೆ, ಮುಖಕ್ಕೆ ತೀವ್ರ ಗಾಯವಾಗಿತ್ತು. ಅವರನ್ನು ಚಾಸಾ-2 ರವರು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ನನ್ನ ಗಂಡನವರು ಕಡೂರು ಕಡೆಯಿಂದ ಬೀರೂರು ಕಡೆಗೆ ಬರುತ್ತಿರುವಾಗ ಬೀರೂರು ಕಡೆಯಿಂದ ಕಡೂರು ಕಡೆಗೆ ಬರುತ್ತಿದ್ದ ಟ್ಯಾಂಕರ್ ವಾಹನವು ಕಾನ್ವೆಂಟ್ ಬಳಿ ರಸ್ತೆಯಲ್ಲಿ ಸದರಿ ಟ್ಯಾಂಕರ್ ಅತೀವೇಗವಾಗಿ ಬಂದು ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ನನ್ನ ಗಂಡ ಸ್ಥಳದಲ್ಲೇ ಮೃತಪಟಿಟರುವ ವಿಚಾರ ನನಗೆ ಚಾಸಾ-2 ರವರಿಂದ ತಿಳಿಯಿತು. ನನ್ನ ಗಂಡ ಚಲಾಯಿಸುತ್ತಿದ್ದ ಬೈಕ್ ಸಂ ಕೆಎ-66 ಇ-6312 ಆಗಿರುತ್ತದೆ. ಆರೋಪಿ ಚಲಾಯಿಸುತ್ತಿದ್ದ ಟ್ಯಾಂಕರ್ ವಾಹನದ ನೊಂದಣಿ ಸಂಖ್ಯೆ ನನಗೆ ತಿಳಿದಿಲ್ಲ. ಅಪಘಾತವು ಟ್ಯಾಂಕರ್ ವಾಹನದ ಚಾಲಕನ ತಪ್ಪಿನಿಂದಲೇ ಆಗಿರುತ್ತದೆ. ಸದರಿ ಚಾಲಕನ ವಿವರವನ್ನು ನಾನು ತಿಳಿದುಕೊಂಡಿರುವುದಿಲ್ಲ. ಘಟನೆಗೆ ಸಂಬಂಧಿಸಿದಂತೆ ಟ್ಯಾಂಕರ್ ವಾಹನದ ಚಾಲಕನ ವಿರುದ್ಧ ಬೀರೂರು ಪೋಲಿಸರಿಗೆ ದಿಃ 18.08.2023 ರಂದು ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ಅಪಘಾತಕ್ಕೆ ಒಳಪಟ್ಟ ಮೋಟರ್ ಬೈಕನ್ನು ಠಾಣೆಯಿಂದ ನಾನು ಬಿಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ಚಾಸಾ-6 ರವರು ಹಾಜರಿದ್ದರು. ಸಾಕ್ಷಿ ದಿಃ 18.10.2023 ರಂದು ನೀಡಿರುವ ಇಂಡಮ್ನಿಟಿ ಬಾಂಡನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ**

ಚಾಸಾ-2 ರವರು ಅಭಿಶೇಕ್ ಸಾಮಿಲ್ ನಲ್ಲಿ ಕೆಲಸ ಮಾಡಿ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ನಡೆದುಕೊಂಡು ಎನ್ ಹೆಚ್ 206 ರ ರಸ್ತೆಯಲ್ಲಿ ಹೋಗುವಾಗ ಬೀರೂರು ಕಡೆಯಿಂದ ಕಡೂರು ಕಡೆಗೆ ಹೋಗುತ್ತಿದ್ದ ಕೆಎ-51 ಎಜಿ-0881 ಟ್ಯಾಂಕರ್ ವಾಹನದ ಚಾಲಕ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ಗಂಡ ಚಲಾಯಿಸುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿ ಅಪಘಾತ ಉಂಟುಮಾಡಿದ ಪರಿಣಾಮ ಅವರ ತಲೆಗೆ, ಮುಖಕ್ಕೆ ತೀವ್ರ ಪೆಟ್ಟಾಗಿ ಸ್ಥಳದಲ್ಲೇ ಮೃತಪಟ್ಟಿರುವ ವಿಚಾರ ಚಾಸಾ-2 ರವರಿಂದ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಟ್ಯಾಂಕರ್ ವಾಹನವನ್ನು ಚಲಾಯಿಸುತ್ತಿದ್ದ ವ್ಯಕ್ತಿಯ ಹೆಸರು ಶಶಾಂಕ್ ಎಂದು ನನಗೆ ತಿಳಿಯಿತು ಎಂದರೆ ಸರಿ. ನನ್ನ ಗಂಡನ ಸಾವಿಗೆ ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣ ಎಂದರೆ ಸರಿ.

**ಪಾಟೀಸವಾಲುಃ ಶ್ರೀ ಸಿ ಜೆ ಎಂ. ಆರೋಪಿ ಪರ ವಕೀಲರಿಂದಃ**

ಅಪಘಾತ ನಡೆದಿದೆ ಎನ್ನಲಾದ ಸ್ಥಳದಲ್ಲಿ ನಾನು ಇರಲಿಲ್ಲ ಎಂದರೆ ಸರಿ. ಮೃತ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆದುಕೊಂಡ ಬಂದ ಸಂದರ್ಬದಲ್ಲಿ ನೂರಾರು ಜನರು ಸೇರಿದ್ದರು ಎಂದರೆ ಸರಿ. ಅಪಘಾತದ ವಿಚಾರವನ್ನು ಚಾಸಾ-2 ರವರು ಪೋಲಿಸರಿಗೆ ತಿಳಿಸಿದ್ದು ಪೋಲಿಸರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ನನಗೆ ಮಾಹಿತಿ ನೀಡಿದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಚಾಸಾ-2 ರವರು ನನಗೆ ವೈಯಕ್ತಿಕವಾಗಿ ಮಾಹಿತಿ ನೀಡಿಲ್ಲ ಎಂದರೆ ಸರಿ ಮತ್ತು ಆ ಸಮಯದಲ್ಲಿ ನಾನು ಅವರನ್ನು ನೋಡಿಲ್ಲ ಎಂದರೆ ಸರಿ. ನಿಪಿ-1 ನ್ನು ನಾನು ಬರೆದಿರುವುದಿಲ್ಲ. ನಿಪಿ-1 ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ನಿಪಿ-1 ನ್ನು ನ್ಯಾಯಾಲಯದಲ್ಲಿ ಓದಿ ಹೇಳಿದ ನಂತರವೇ ಅದರಲ್ಲಿ ಬರೆದಿರುವ ವಿಚಾರ ನನಗೆ ತಿಳಿಯಿತು ಎಂದರೆ ಸರಿ. ಮೃತ ಅಶೋಕ್ ಚಲಾಯಿಸುತ್ತಿದ್ದ ವಾಹನ ಅವರ ಹೆಸರಿನಲ್ಲಿತ್ತು. ಅವರಿಗೆ ವಾಹನ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಚಾಲನಾ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೋ ಇಲ್ಲವೋ ಎಂದು ನನಗೆ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ವಾಹನ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಟ್ಯಾಂಕರ್ ವಾಹನವು ಮೋಟರ್ ಸೈಕಲ್ ನ ಎಡಭಾಗಕ್ಕೆ ಗುದ್ದಿರುತ್ತದೆ. ಅಪಘಾತದ ಸ್ಥಳಕ್ಕೆ ನಾನು ಹೋಗಿರುವುದಿಲ್ಲ. ಅಪಘಾತದ ಸ್ಥಳಕ್ಕೆ ನಾನು ಹೋಗದೆ ಇರುವ ಕಾರಣ ರಸ್ತೆಯ ಯಾವ ಭಾಗದಲ್ಲಿ ಅಪಘಾತವಾಗಿದೆ ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲಾ ಎಂದರೆ ಸರಿ.

ಟ್ಯಾಂಕರ್ ವಾಹನವು ಬೀರೂರು ಕಡೆಯಿಂದ ಬಂದು ನನ್ನ ಗಂಡ ಚಲಾಯಿಸುತ್ತಿದ್ದ ಬೈಕಿಗೆ ಗುದ್ದಿರುತ್ತದೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಗಂಡ ವಾಹನ ಪರವಾನಗಿ ಇಲ್ಲದೇ ಬೈಕನ್ನು ಚಲಾಯಿಸಿ ಬೈಕಿನ ಮುಂಭಾಗದಲ್ಲಿ ಹೋಗುತ್ತಿದ್ದ ಕಾರಿಗೆ ಡಿಕ್ಕಿಪಡಿಸಿ ಎದುರುಗಡೆಯಿಂದ ಬರುತ್ತಿದ್ದ

ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಮೃತ ವ್ಯಕ್ತಿಯ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದಲೇ ಅಪಘಾತಪಡಿಸಿದ ಕಾರಿನ ವಿವರ ಲಭ್ಯವಿಲ್ಲದ ಕಾರಣ ಪರಿಹಾರ ಪಡೆಯುವ ಸಲುವಾಗಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆರೋಪಿಯ ಯಾವುದೇ ನಿರ್ಲಕ್ಷತನ ಇಲ್ಲಾ ಎಂದರೆ ಸರಿಯಲ್ಲ. ಆರೋಪಿಯು ರಸ್ತೆಯ ಎಡಭಾಗದಲ್ಲಿ ನಿದಾನವಾಗಿ ವಾಹನವನ್ನು ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಚಾಸಾ-3 ರಿಂದ 12 ರವರು ನನ್ನ ಗಂಡನ ಸ್ನೇಹಿತರು ಮತ್ತು ನನ್ನ ಪರಿಚಯಸ್ಥರು ಎಂದರೆ ಸರಿ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.